# ಸೈಬರ್ ಕಬಂಧ

## ನಾವೆಷ್ಟು ಸುರಕ್ಷಿತ?

ಈ ನವೀನ ಯುಗದ ಜಗದ ಕೇತನದಂತೆ ಮೊಬೈಲ್ ಫೋನ್‌ಗಳು ಸರ್ವವ್ಯಾಪಿಯಾಗಿವೆ. ಅಂತರ್ಜಾಲದ ಮೂಲಕ ಬೆರಳತುದಿಯಲ್ಲಿ ವಿಶ್ವವನ್ನು ಜಾಲಾಡುವುದು ಸಾಧ್ಯವಾಗಿದೆ. ಈ ಬದಲಾವಣೆಯೇ ಸೈಬರ್ ವಂಚನೆಗಳು ತಲೆಯೆತ್ತಲಿಕ್ಕೆ ಕಾರಣವಾಗಿದೆ. ಸೈಬರ್ ವಂಚನೆ ಎನ್ನುವುದೀಗ ವಿಸ್ಮಯದ ಕಥೆಯಾಗಿ ಉಳಿಯದೆ, ಮನೆ ಮನೆಯ ವ್ಯಥೆ ಎನ್ನುವಂತಾಗಿದೆ. ಕೊಂಚ ಎಚ್ಚರತಪ್ಪಿದರೆ ಹಣ, ಮಾಹಿತಿ, ಮಾನವಷ್ಟೇ ಅಲ್ಲ, ಪ್ರಾಣವೂ ಹರಣವಾಗಬಹುದು ಎನ್ನುವುದಕ್ಕೆ ಉದಾಹರಣೆಗಳು ನಮ್ಮ ಸುತ್ತಮುತ್ತಲೇ ಇಣುಕುತ್ತಿವೆ. ಎಷ್ಟೇ ಜಾಗರೂಕರಾಗಿದ್ದರೂ ಒಂದಲ್ಲಾ ಒಂದು ಬಾರಿ, ಒಂದಲ್ಲಾ ಒಂದು ರೀತಿಯಲ್ಲಿ ನಾವೆಲ್ಲ ಸೈಬರ್ ವಂಚನೆಯ ಅನುಭವಕ್ಕೆ ಒಳಗಾಗಿರುತ್ತೇವೆ. ನಮ್ಮ ಮಾಹಿತಿಯನ್ನು ನಮಗೆ ಗೊತ್ತಿಲ್ಲದಂತೆ ಅನಾಮಿಕರಿಗೆ ಒಪ್ಪಿಸುವುದು ಕೂಡ ವಂಚನೆಗೆ ಒಳಗಾಗುವ ಮಾರ್ಗವೇ ಆಗಿದೆ. ಮಾಹಿತಿ ತಂತ್ರಜ್ಞಾನ ಯುಗದಲ್ಲಿ ನಮ್ಮ ಜುಟ್ಟನ್ನು ನಮಗೆ ಗೊತ್ತಿಲ್ಲದಂತೆಯೇ ದೂರದ ಅನಾಮಿಕನೊಬ್ಬ ಹಿಡಿದುಕೊಂಡಿರಲಿಕ್ಕೆ ಸಾಧ್ಯವಿದೆ.ಹಿಂತಿರುಗಿ ಬರಲು ಸಾಧ್ಯವಿಲ್ಲ ಎನ್ನುವಮಟ್ಟಿಗೆ ಡಿಜಿಟಲ್ ಜಗತ್ತಿಗೆ ನಮ್ಮನ್ನು ಒಪ್ಪಿಸಿಕೊಂಡಿರುವ ಸಂದರ್ಭದಲ್ಲಿ, ನಮ್ಮ ಬೆರಳ ತುದಿಯೂ ಮೆದುಳಿನಂತೆ ವರ್ತಿಸಬೇಕಾಗಿದೆ ಹಾಗೂ ಮೈಯೆಲ್ಲ ಕಣ್ಣಾಗಿ ರೂಪುಗೊಳ್ಳಬೇಕಾಗಿದೆ. ಸೈಬರ್ ವಂಚನೆಯ ವಿರಾಟ್ ಸ್ವರೂಪದ ಅವಲೋಕನ, ಈ ಸಂಚಿಕೆಯ 'ಸುಧಾ' ವಿಶೇಷ.

■ ಸುಧೀಂದ್ರ ಪ್ರಸಾದ್ ಇ.ಎಸ್.